

ಟಿ.ಎಂ.ರಮೇಶ

ಸುಮಾರು ಮೂವತ್ತೈದು ವರ್ಷಗಳ ನಂತರ ಮಲೆನಾಡ ಚಳಿಗಾಲದ ಬೆಚ್ಚಗಿನ ಸೂರ್ಯ ತನ್ನ ಉಸಿರಲ್ಲಿ ಬಿಸಿ ತುಂಬಿಸುವ ಮುನ್ನ ಸಿರಿಪುರದ ಬಸ್ ನಿಲ್ದಾಣದಲ್ಲಿಳಿದೆ. ಸುತ್ತಣ ಮರಗಳಿಂದ ಬೀಸುವ ಶುದ್ಧ ತಂಗಾಳಿ, ಬಸ್ಸಿನ ಉಸಿರು ಕಟ್ಟಿಸುವ ವಾತಾವರಣದಿಂದ ಇಳಿದವನಿಗೆ ಸಹಜವಾಗಿಯೇ ಆಹ್ಲಾದಕರವೆನ್ನಿಸಿತು. ಕೆಳಗೆ ಲಗ್ಗೇಜನ್ನಿರಿಸಿ ಸುತ್ತ ನೋಡಿದೆ. ಅದೇ, ಅದೇ ಜಾಗ. ಮೂವತ್ತೈದು ವರುಷಗಳ ಹಿಂದಿದ್ದ ಅದೇ ನಿಲ್ದಾಣವೇ. ಜಾಗವಿರಲಿ, ಕಟ್ಟಡವೂ ಬದಲಾಗಿಲ್ಲ. ಬಸ್ಸುಗಳು ನಿಲ್ಲುವ ಜಾಗದಲ್ಲಿ ಮೊದಲಿನ ಹಾಗೆ ಮಣ್ಣಿನ ಬದಲಾಗಿ ಡಾಂಬರು ಹಾಕಲ್ಪಟ್ಟಿತ್ತು. ಅದೂ ಅಲ್ಲಲ್ಲಿ ಹೊಂಡ ಬಿದ್ದು ಜಲ್ಲಿ ಉಗುಳುತ್ತ ಮುಂದೆ ಹೋಗುತ್ತಿರುವ ದೇಶದ ಒಳಗಿನ ಕಂದಕ ಕಂಟಕಗಳನ್ನು ಸಾಂಕೇತಿಕವಾಗಿ ತೋರಿಸುತ್ತಿರುವಂತಿತ್ತು. ಆಗ ಇದ್ದಿದ್ದ ಎರಡು ಅಂಗಡಿ, ಒಂದು ಹೊಟೇಲುಗಳ ಬದಲು ಇಪ್ಪತ್ತು ಮೂವತ್ತು ಅಂಗಡಿಗಳು ನಾಲ್ಕಾರು ಹೊಟೇಲುಗಳಿದ್ದವು. ಅಂಗಡಿಗಳು ಗುಟುಕಾ, ಚಿಪ್ಸ್ ಪ್ಯಾಕೆಟ್ಟುಗಳ ಸರದಿಂದ ಅಲಂಕೃತವಾಗಿದ್ದವು. ಆಗ ಇರುತ್ತಿದ್ದ, ಇಲ್ಲದೆಯು ಇರುತ್ತಿದ್ದ ಒಂದೋ ಎರಡೋ ಬಸ್ಸುಗಳ ಕಾರಣದಿಂದ ಬಿಕೋ ಎನ್ನುತ್ತಿದ್ದ ನಿಲ್ದಾಣದಲ್ಲಿ ಈಗ ಒಂದರ ಕುಂಡೆಸಂದಿಗೆ ಇನ್ನೊಂದು ಎನ್ನುವಂತೆ ಎಂಟ್ಹತ್ತು ಬಸ್ಸುಗಳು ಸಾಲುಗಟ್ಟಿ ನಿಂತಿದ್ದವು. ಆಗ ವಿರಳವಾಗಿರುತ್ತಿದ್ದ ಜನರ ಬದಲು ಈಗ ಗಿಜಿಗುಡುವಷ್ಟು ಜನರು...



ರಾಠೋಡ್